# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

("ವಿ ಟಿ ಯುಅಧಿನಿಯಮ 1994" ರ ಅಡಿಯಲ್ಲಿ ಕರ್ನಾಟಕ ಸರ್ಕಾರದಿಂದ ಸ್ಥಾಪಿತವಾದರಾಜ್ಯ ವಿಶ್ವವಿದ್ಯಾಲಯ)
"ಜ್ಞಾನ ಸಂಗಮ", ಬೆಳಗಾವಿ - 590 018, ಕರ್ನಾಟಕ ರಾಜ್ಯ
ಫೋನ್: (0831)2405468 ಫ್ಯಾಕ್ಸ್: **(0831)2405467**

ಉಲ್ಲೇಖ : ವಿತಾವಿ/ಆ.ಸ./2022-23/6750 ದಿನಾಂಕ :09.02.2023

## ಅಧಿಸೂಚನೆ

**ವಿಷಯ :ವಿ.ತಾ.ವಿ.ಯ ಇಪ್ಪತ್ತೆರಡನೇಯ ವಾರ್ಷಿಕ ಘಟಿಕೋತ್ಸವ ಸಮಾರಂಭ**

ಮೇಲ್ಕಾಣಿಸಿದ ವಿಷಯದನ್ವಯ, ಈ ಮೂಲಕ ತಿಳಿಸುವುದೇನೆಂದರೆ, ವಿ.ತಾ.ವಿ.ಯ ಇಪ್ಪತ್ತೆರಡನೇಯ ಘಟಿಕೋತ್ಸವ ಸಮಾರಂಭವು **ಶುಕ್ರವಾರ, ದಿನಾಂಕ 24, ಫೆಬ್ರವರಿ 2023**ರಂದು, ಪೂರ್ವಾಹ್ನ **11-30** ಗಂಟೆಗೆ ವಿ.ತಾ.ವಿ.ಯ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಪ್ರೇಕ್ಷಾಗೃಹ, "ಜ್ಞಾನ ಸಂಗಮ", ಬೆಳಗಾವಿಯಲ್ಲಿ ಏರ್ಪಡಿಸಲಾಗಿದ್ದು ಪದವಿ ಪಡೆದ ಅಭ್ಯರ್ಥಿಗಳನ್ನು ಈ ಮೂಲಕ ಘಟಿಕೋತ್ಸವದಲ್ಲಿ ಪಾಲ್ಗೊಳ್ಳಲು ಆಹ್ವಾನಿಸಲಾಗಿದೆ.

**ದಯವಿಟ್ಟು ಗಮನಿಸಿ: ಘಟಿಕೋತ್ಸವ ಸಮಾರಂಭವನ್ನು ಈ ಕೆಳಗಿನಂತೆ ಎರಡು ಅವಧಿಗಳಲ್ಲಿ ಆಯೋಜಿಸಲಾಗಿದೆ:**

**ಮೊದಲನೇಯ ಅವಧಿ : ಪೂರ್ವಾಹ್ನ 11-30 ರಿಂದ ಅಪರಾಹ್ನ 1-30 ರವರೆಗೆ**

ಪದವಿ ಪ್ರದಾನ ಸಮಾರಂಭ

2021-22ನೇ ಸಾಲಿನ (ಪದವಿ ಮತ್ತು ಸ್ನಾತಕೋತ್ತರ ವಿಭಾಗದಲ್ಲಿ) ಸುವರ್ಣ ಪದಕ ಮತ್ತು ಪ್ರಥಮರ್‍ಯಾಂಕ ಪಡೆದ ಪದವಿಧರರಿಗೆ ಪದವಿ ಪ್ರದಾನ ಮಾಡಲಾಗುವುದು.

**ಎರಡನೇ ಅವಧಿ :ಅಪರಾಹ್ನ 4-00 ರಿಂದ 5-30 ರವರೆಗೆ**

2021-22ನೇ ಸಾಲಿನಲ್ಲಿ ಪಿಹೆಚ್.ಡಿ.ಪದವಿಯನ್ನು ಹೊಂದಿದವರಿಗೆ ಪದವಿ ಪತ್ರವನ್ನು ಪ್ರದಾನ ಮಾಡಲಾಗುವುದು.

ಅಭ್ಯರ್ಥಿಗಳು ಈ ಕೆಳಗಿನವುಗಳನ್ನು ಗಮನಿಸಬೇಕು:

* ಅಭ್ಯರ್ಥಿಗಳು ಮೇಲೆ ಉಲ್ಲೇಖಿಸಿದ, ತಮಗೆ ಸಂಬಂಧಿಸಿದ ಅವಧಿಯಲ್ಲಿ ಮಾತ್ರ ಪ್ರೇಕ್ಷಾಗೃಹಕ್ಕೆ ಪ್ರವೇಶಿಸಿವುದು
* ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ತಿಳಿಸಿರುವಂತೆ ಶುಭ್ರವಾದ ಬಿಳಿಬಟ್ಟೆಗಳನ್ನು ಧರಿಸಿಕೊಂಡು ಪ್ರೇಕ್ಷಾಗೃಹದಲ್ಲಿ ಹಾಜರಿರಬೇಕು
* ಘಟಿಕೋತ್ಸವವು ಪ್ರಾರಂಭವಾಗುವುದಕ್ಕಿಂತ ಅರ್ಧಘಂಟೆ ಮುಂಚಿತವಾಗಿ ಪ್ರೇಕ್ಷಾಗೃಹದಲ್ಲಿ ಹಾಜರಿದ್ದು ತಮ್ಮ ಆಸನಗಳಲ್ಲಿ ಕುಳಿತುಕೊಳ್ಳಬೇಕು
* ಕೋವಿಡ್–19 ಸಾಂಕ್ರಾಮಿಕ ರೋಗದ ಕುರಿತಂತೆ ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮದ ಸಂಬಂಧವಾಗಿ ಸರಕಾರವು ಕಾಲಕಾಲಕ್ಕೆ ಹೊರಡಿಸಿರುವ ಮಾರ್ಗಸೂಚಿಯನ್ನುಅನುಸರಿಸುವುದು
* ಶೀತ, ಕೆಮ್ಮು, ಜ್ವರ ಮುಂತಾದ ಲಕ್ಷಣಗಳು ಕಂಡುಬಂದಲ್ಲಿ ಈ ಘಟಿಕೋತ್ಸವ ಸಮಾರಂಭದಲ್ಲಿ ಪಾಲ್ಗೊಳ್ಳದಂತೆ ಸಲಹೆಯನ್ನು ನೀಡಲಾಗಿದೆ
* ವಿಶ್ವವಿದ್ಯಾಲಯದ ಕುಲಾಧಿಪತಿಗಳಾದ ಸನ್ಮಾನ್ಯ ರಾಜ್ಯಪಾಲರು ಮತ್ತು ಇತರ ಗಣ್ಯರು ಸಭಾಂಗಣವನ್ನು ಪ್ರವೇಶಿಸುತ್ತಿದ್ದಂತೆ ಹಾಗೂ ಆಸೀನರಾಗುವವರೆಗೆ ಎಲ್ಲರೂ ಎದ್ದು ನಿಂತು ಗೌರವ ಸೂಚಿಸಬೇಕು
* ಘಟಿಕೋತ್ಸವ ಸಮಾರಂಭವು ಪೂರ್ತಿ ಮುಗಿಯುವವರೆಗೆ ಶಾಂತತೆಯನ್ನು ಮತ್ತು ಶಿಸ್ತನ್ನು ಕಾಪಾಡಿಕೊಳ್ಳಬೇಕು
* ಸಭಾಂಗಣದಲ್ಲಿ ಮೊಬೈಲ್‌ಫೋನ್ ಚಾಲನೆಯಲ್ಲಿಡಬಾರದು
* ಘಟಿಕೋತ್ಸವ ಮುಗಿದಮೇಲೆ ಮೆರವಣಿಗೆಯು ಸಭಾಂಗಣವನ್ನು ಬಿಟ್ಟು ತೆರಳುವವರೆಗೆ ಎಲ್ಲರೂ ತಮ್ಮ ಸ್ಥಳಗಳಲ್ಲಿಯೇ ದಯವಿಟ್ಟು ಎದ್ದು ನಿಂತಿರಬೇಕು
* ಕುಲಸಚಿವರು (ಪರಿಕ್ಷಾಂಗ) ಇವರು ಘಟಿಕೋತ್ಸವದಲ್ಲಿ ಪಾಲ್ಗೊಳ್ಳುವ ಸಂಬಂಧವಾಗಿ ನೀಡುವ ನಿರ್ದೇಶನವನ್ನು ಪಾಲಿಸುವುದು

ಪದವಿ ಪ್ರಮಾಣ ಪತ್ರಗಳನ್ನು ವೈಯಕ್ತಿಕವಾಗಿ ಪಡೆಯಬಯಸುವ ಇತರ ಅಭ್ಯರ್ಥಿಗಳು ದಿ:**27-02-2023**ರಂದು ಮಧ್ಯಾಹ್ನ**12-00** ಗಂಟೆಯಿಂದ **5-30** ಗಂಟೆಯವರೆಗಿನ ಅವಧಿಯಲ್ಲಿ, ಕಾಲೇಜಿನಿಂದ ಕೊಡಲ್ಪಟ್ಟ ಗುರುತಿನಚೀಟಿಯನ್ನು ತೋರಿಸಿ ಪರೀಕ್ಷಾ ವಿಭಾಗದಿಂದ ಪಡೆದುಕೊಳ್ಳಬಹುದು. ಉಳಿದವರಿಗೆ ಅಂಚೆಯ ಮೂಲಕ ಪದವಿ ಪ್ರಮಾಣ ಪತ್ರಗಳನ್ನು ಘಟಿಕೋತ್ಸವ ನಂತರ ಕಳುಹಿಸಿಕೊಡಲಾಗುವುದು.

ಆಜ್ಞೆಯ ಮೇರೆಗೆ
(ಡಾ.ಬಿ. ಈ. ರಂಗಸ್ವಾಮಿ)
ಕುಲಸಚಿವರು